"ಏಕೆ? ನಾನೇನು ಅಪರಾಧವನ್ನು ಮಾಡಿದ್ದೇನೆ?"

"ನಿನಗೆ ಅರ್ಥವಾಗಲಿಲ್ಲ, ಅದು ಗೊಂಬೆ ಮಾತ್ರವಾಗಿರಲಿಲ್ಲ; ಗುಪ್ತ ವೇಷ ಸಹ ಅನೇಕ ರೂಪಗಳನ್ನು ಧರಿಸುತ್ತವೆ."

ನಾನು ಕೈಟಿಯ ವ್ಯರ್ಥ ಮಾತುಗಳನ್ನು ಹೆಚ್ಚು ಕೇಳಲು ಸಾಧ್ಯವಿರಲಿಲ್ಲ. ಒಳಗಿನಿಂದ ಗೊಂಬೆ ತಂದು ಅವಳಿಗೆ ಕೊಟ್ಟೆ. ಅವಳು ಗೊಂಬೆಯನ್ನು ತನ್ನ ಹೆಗಲಿಗೆ ಒತ್ತಿಕೊಂಡು ಹೇಳಿದಳು, "ಈಗ ನಿನಗೆ ನಾನೊಂದು ಒಳ್ಳೆಯ ಸುದ್ದಿಯನ್ನು ಹೇಳುತ್ತೇನೆ. ನಿನ್ನೆ ರಾತ್ರಿ ಒಂಬತ್ತು ಗಂಟೆಗೆ ಸುಂದರ ಗಿಳಿಯನ್ನೇರಿ ಪ್ರೀತಿಯ ಕಾಮದೇವ ಅಥವಾ ಮತ್ತೆ... ಮಹಾನ್ ದೇವರು ಅದೃಶ್ಯ ರೂಪದಲ್ಲಿ ನನ್ನ ಮನೆಗೆ ಇಳಿದು ಬಂದ. ಆದರೆ, ಮತ್ತೆ ಅದೇ ದೇವರು ಆತ್ಮದ ರೂಪವನ್ನು ತಾಳಿದ. ನನ್ನ ಮನೆ ಮತ್ತೊಮ್ಮೆ ನೆಲೆಸಿತು. ನನ್ನ ಏಕಾಂತ ಕೊನೆಗೊಂಡಿದೆ".

"ದೇವರು ಗಿಳಿಯನ್ನು ನಿನ್ನ ಮನೆಯಲ್ಲಿ ಬಿಟ್ಟು ಹೋದನೇ?"

"ನಾನು ನಿನ್ನಂಥ ಮೂರ್ಖ ನೆರಮನೆಯವನು ಇಲ್ಲದೆಯೇ ನನ್ನ ಕೆಲಸವನ್ನು ಮಾಡಿಕೊಳ್ಳಬಲ್ಲೆ. ಕಾಮದೇವ ಅಗಲಿದ ಜೋಡಿಗಳನ್ನು ಒಂದುಗೂಡಿಸಿದಾಗ, ನನ್ನ ಪತಿ ಮನೆಗೆ ಬಂದಿದ್ದರು. ಆಗ ಗಿಳಿಯಿಂದ ನನಗೇನು ಕೆಲಸ? ನೀನು ಅನೇಕ ದಿನಗಳಿಂದ ಕೈಲಿಯೊಂದಿಗೆ ಮಲಗುತ್ತಿದ್ದೀಯ, ಆದರೂ ನಿನಗೆ ಏನೂ ಅರ್ಥವಾಗಲಿಲ್ಲವೇ?"

ನನಗೆ ಅತೀವ ಸಿಟ್ಟು ಬಂತು. ಆದರೆ, ನಾನು ಏನನ್ನಾದರೂ ಹೇಳುವ ಮೊದಲೇ ಅವಳು ಮನೆಗೆ ಮರಳಿ ಹೋದಳು. ನನ್ನ ಸಿಟ್ಟನ್ನು ಶಮನಗೊಳಿಸಲು ಕೈಟಿಯ ಬಗ್ಗೆ ಸಮಾಲೋಚಿಸಲು ಇಲೇನಳಿದ್ದಲ್ಲಿಗೆ ಹೊರಟೆ.

ಇಲೇನ್ ಹೇಳಿದಳು: "ಕೈಟಿ ನಿನ್ನನ್ನು ಮೂರ್ಖ ಎನ್ನುವುದು, ನಿನ್ನ ಯೋಗ್ಯತೆಗೆ ಸಾಕ್ಷಿಯಾಗಿದೆ. ನೀನು ಅವಳ ಇಂಥ ಮಾತುಗಳನ್ನು ಕೇಳಬೇಡ. ನಿನ್ನ ಪ್ರೀತಿಯ ಕೈಲಿ ಶೀಘ್ರವೇ ಬರುವುದು ನಿನಗೆ ಗೊತ್ತಿತ್ತು. ಅವಳ ಲಂಚ್ ಅನ್ನು ಒಪ್ಪದಿದ್ದದ್ದು ನಿನ್ನ ಬುದ್ಧಿವಂತಿಕೆಯಾಗಿತ್ತು. ತನ್ನ ಮಾನಸಿಕ ಅಸ್ವಸ್ಥತೆಯಿಂದಾಗಿ ಅವಳು ನಿನ್ನನ್ನು ಸಮಸ್ಯೆಗೆ ಸಿಲುಕಿಸುತ್ತಿದ್ದಳು, ಆದರೆ ಅವಳ ಅಂಗಳದಲ್ಲಿ ಮಗ ಆಡುವ ಮಾತು ದುಃಖಕರವಾಗಿದೆ."

"ಇದೂ ಸಹ ಅವಳ ಕಾಯಿಲೆಯಿಂದಾಗಿ ಆಗಿರಬೇಕು. ಇಲ್ಲ, ಇದಲ್ಲ. ನಿಜ ಹೇಳಬೇಕೆಂದರೆ ನಾಲ್ಕು ವರ್ಷಗಳ ಹಿಂದೆ, ಮದುವೆಯಾಗಿ ಒಂದು ವರ್ಷದ ಅನಂತರ ಅವಳಿಗೆ ಗರ್ಭಪಾತವಾಗಿತ್ತು. ಆ ದುರ್ಘಟನೆ ಅವಳ ತಲೆಯಿಂದ ಹೋಗುತ್ತಿಲ್ಲ."

"ಇಲೇನ್, ನನಗೆ ಈ ವಿಷಯ ತಿಳಿದಿರಲಿಲ್ಲ. ಅಂಥ ದುಃಖವನ್ನು ಅವಳು ಹೇಗೆ ಸಹಿಸಿರಬೇಕು? ಅವಳ ಗಂಡನನ್ನು ನಾನಿದುವರೆಗೆ ನೋಡಿಲ್ಲ."

"ಇದೂ ಸಹ ಅವಳ ಬದುಕಿನ ದುರ್ಘಟನೆಯೇ ಆಗಿದೆ. ಕೈಟಿಗೆ ಗರ್ಭಪಾತವಾದ ಕೆಲವೇ ದಿನಗಳಲ್ಲಿ ಅವಳ ಗಂಡ ಯುವತಿಯೊಬ್ಬಳೊಂದಿಗೆ ಓಡಿ ಹೋಗಿದ್ದ. ಈ ಎರಡನೆಯ ಆಘಾತದಿಂದಾಗಿ ಅವಳ ಅಳಿದುಳಿದ ಸಮತೋಲನ ಸಹ ಹದಗೆಟ್ಟಿತ್ತು. ಈ ಎರಡು ದುಃಖದ ಸಂಗತಿಗಳು ಅವಳನ್ನು ಗೆದ್ದಲು ಹುಳಗಳಂತೆ ತಿನ್ನುತ್ತಿವೆ."

"ಮನುಷ್ಯ ದುಃಖವನ್ನು ಎಷ್ಟಂತ ಸಹಿಸಲು ಸಾಧ್ಯ?"

"ಆದರೆ, ಕೈಟಿ ದುಃಖ ಪಡುವುದು ಬೇರೆಯವರ ಅವಮಾನಕ್ಕೆ ಕಾರಣವಾಗಬಾರದು. ಯಾರು ತಾನೇ ದುಃಖಿಯಲ್ಲ? ಆದರೆ, ಪ್ರತಿಯೊಬ್ಬರ ದುಃಖ ಅವರ ದುಃಖವೇ ಆಗಿರುತ್ತದೆ. ನೀನು ಅವಳ ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಅವಳ ತಲೆಯಲ್ಲಿ ಏನೇನು ಇದೆಯೋ? ಹಾಂ, ಅವಳು ಹೇಳಿದ ದೇವರ ಪುರಾಣ ನನಗೂ ಇಷ್ಟವಾಯಿತು. ಭಾರತದ ಪುರಾಣ ತುಂಬಾ ಸಮೃದ್ಧವಾಗಿದೆ."